**IN THE COURT OF THE SENIOR CIVIL JUDGE AND JMFC, TIPTUR.**

**MVC No. 1314/2023**

**PW-1**

**Oath is Administered to the Witness on 20.12.2025**

**Cross Examination by: Sri K.B.B for K.H.G Counsel for Respondent No.2**

ಮೃತ ಮಂಜುನಾಥ ನನ್ನ ಗಂಡ. ಅಪಘಾತವಾಗಿದೆ ಎಂದು ಹೇಳಿದ್ದು ಆ ಸಮಯದಲ್ಲಿ ನನ್ನ ಗಂಡ ಕಾಯಿತಿಮ್ಮನಹಳ್ಳಿ ದೇವಸ್ಥಾನದಿಂದ ನಮ್ಮ ಮನೆಗೆ ಮಾಗೇನಹಳ್ಳಿಗೆ ಬರುತ್ತಿದ್ದರು. ಚೌಡೇನಹಳ್ಳಿ ಗೇಟ್ ಬಳಿ ಅಪಘಾತ ಆಗಿತ್ತು. ನನ್ನ ಗಂಡ ಆ ದಿನ ದ್ವಿ ಚಕ್ರ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದರು. ಹಿಂಬದಿಯಲ್ಲಿ ನನ್ನ ಮಾವ ಶಂಕ್ರಯ್ಯ ಮತ್ತು ಪ್ರೇಮ ಎನ್ನುವ ನಮ್ಮ ಪಕ್ಕದ ಮನೆಯವರು ಕುಳಿತಿದ್ದರು. ನನ್ನ ಗಂಡನ ಬಳಿ ಸದರಿ ಬೈಕ್ ಚಾಲನೆ ಮಾಡಲು ಡಿಎಲ್ ಇತ್ತು ಮತ್ತು ಆ ವಾಹನಕ್ಕೆ ವಿಮೆ ಇತ್ತು. ಅವುಗಳನ್ನು ನ್ಯಾಯಾಲಯಕ್ಕೆ ಹಾಜರಜಪಡಿಸಲು ತೊಂದರೆ ಇಲ್ಲ. ಆ ದಿನ ನನ್ನ ಗಂಡ ತನ್ನ ವಾಹನದಲ್ಲಿ ಇಬ್ಬರು ಹಿಂಬದಿ ಸವಾರರನ್ನು ಕುಳಿತುಕೊಂಡು ಹತೋಟಿ ಕಳೆದುಕೊಂಡು ಸ್ವತಃ ಅಪಘಾತ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆತನ ತಪ್ಪಿದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಗಂಡನ ವಿರುದ್ದ ಸಹ ಚಾರ್ಜ್ ಶೀಟ್ ಹಾಕಲಾಗಿದೆ ಎಂದರೆ ನಿಜ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಅಪಘಾತದ ಬಗ್ಗೆ ನನಗೆ ನನ್ನ ಅತ್ತೆ ಫೋನ್ ಮುಖಾಂತರ ತಿಳಿಸಿದ್ದರು. ಎದುರುದಾರನ ಬೈಕ್ ಚಾಲಕನು ಆತನ ವಾಹನವನ್ನು ಸರಿಯಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಮತ್ತು ನನ್ನ ಗಂಡನೇ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿಕೊಂಡು ಹೋಗಿ ಆ ರೀತಿ ಅಪಘಾತ ಮಾಡಿದ್ದಾನೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿದೆ ಎಂದು ಹೇಳಿದರೆ ಪರಿಹಾರ

ಸಿಗುವುದಿಲ್ಲ ಎಂದು ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ಗಂಡ ವ್ಯವಸಾಯ ಮತ್ತು ಪ್ಲಂಬಿಂಗ್ ಕೆಲಸ ಮಾಡುತ್ತಿದ್ದರು ಮತ್ತು ಆತನಿಗೆ ತಿಂಗಳ ಆದಾಯ 30 ಸಾವಿರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ನಾನು ಮತ್ತು ಉಳಿದ ಅರ್ಜಿದಾರರು ಬೇರೆ ಬೇರೆ ವಾಸವಿದ್ದೇವೆ ಎಂದರೆ ಸರಿಯಲ್ಲ. ನಮಗೆ ಸ್ವಂತ ದುಡಿಮೆ ಇದೆ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ಅರ್ಜಿದಾರರು ಮೃತನ ಮೇಲೆ ಯಾವತ್ತೂ ಸಹ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಆಗದೇ ಇದ್ದರೂ ಸಹ ಅಪಘಾತ ಆಗಿದೆ ಎಂದು ತಿರುಚಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ 2ನೇ ಎದುರುದಾರ ಪರಿಹಾರ ಕೊಡಲು ಬಾದ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

1ನೇ ಎದುರುದಾರನ ಚಾಲಕನ ಬಳಿ ಡಿ ಎಲ್ ಇರಲಿಲ್ಲ ಎಂದರೆ ಗೊತ್ತಿಲ್ಲ. ಆ ಕಾರಣದಿಂದ 2ನೇ ಎದುರುದಾರ ವಿಮಾ ಕಂಪನಿ ಪರಿಹಾರ ನೀಡಲು ಬಾಧ್ಯ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಶವಸಂಸ್ಕಾರಕ್ಕೆ 2 ಲಕ್ಷ ಖರ್ಚು ಮಾಡಿದ್ದೇನೆಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಆ ದಿನ ಹೆಲ್ಮೆಟ್ ಮಾಡಿ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. 1ನೇ ಎದುರುದಾರ ನನ್ನ ಗಂಡನ ಸಂಬಂಧಿಕನಾಗಿದ್ದಾನೆ ಎಂದರೆ ಸರಿಯಲ್ಲ. ಆದ್ದರಿಂದ ಆತನ ಜೊತೆ ಶಾಮೀಲಾಗಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**Re-Examination NIL**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR